

# ಅಣಶಿಯೂ... ಕನ್ನಡ ನಾಟಕವೂ...

ಅಣಶಿ ಎಂಬ ಕಾಡಿನ ಊರಿನಲ್ಲಿ ಚಳಿ ತನ್ನ ಹೆಜ್ಜೆಯನ್ನಿಟ್ಟ ಕಾಲಕ್ಕೆ ಸರಿಯಾಗಿ ನಾಟಕ ನಡೆಯುತ್ತದೆ. ಹುಲಿ ಸಂರಕ್ಷಿತ ಪ್ರದೇಶವೆಂದು ಹೆಸರುವಾಸಿಯಾದ ಊರಿನಲ್ಲಿ ಜನರಿಗಿಂತ ಪ್ರಾಣಿಗಳೇ ಹೆಚ್ಚು. ಅಣಶಿ ಅಜುಮಾಸು ಇನ್ನೂರು ಜನರಿರುವ ಕಾಡಿನ ಸಣ್ಣ ಊರು. ಮಳೆ ಚಳಿ ಬಿಸಿಲು ಏನೇ ಆದರೂ ಅಣಶಿ ಸದಾ ಕಾಲ ತಂಡು. ಸರ್ಕಾರದ ಅದ್ಯಾವುದೋ ಯೋಜನೆಯ ಪ್ಯಾಕೇಜು ಪಡೆದು ಐದಾರು ಕುಟುಂಬಗಳು ಅಣಶಿಯಿಂದ ದೂರವಾಗಿರುವುದು ಬಿಟ್ಟರೆ, ಅಣಶಿಯ ಮೂಲನಿವಾಸಿಗಳಾದ ಕುಣಬಿಗಳು, ಮರಾಠಿಗರು, ದೇವಳಿಗರು ಇಲ್ಲಿದ್ದಾರೆ. ಇವರೊಂದಿಗೆ ಅಣಶಿ ಅರಣ್ಯ ಇಲಾಖೆಯ ಕೆಲಸಕ್ಕೆ ಬೇರೆ ತಾಲೂಕುಗಳಿಂದ ಬಂದ ಮುಸ್ಲಿಂ ಕುಟುಂಬ, ಘಟ್ಟದ ಮೇಲಿನವರು ಹಾಗೂ ಘಟ್ಟದ ಕೆಳಗಿನ ನಮ್ಮಂತಹ ಸರ್ಕಾರಿ ಶಾಲೆ ಮಾಸ್ತರಿಕೆ ಅರಸಿ ಬಂದವರು ಸೇರಿ ಒಂದಿಷ್ಟು ಜನ ಕಾಣುತ್ತಾರೆ. ಇವರೆಲ್ಲರ ಇರುವಿಕೆಗೆ ಸಾಕ್ಷಿ ಎಂಬಂತೆ ತಾಮಡೋ ಮಾಮನ ಮನೆಯ ಅಂಗಳ, ಕಿರಾಣಿ ಅಂಗಡಿಯಾಗಿಯೂ, ಇನ್ನರ್ಧ ಸಣ್ಣ ಹೊಟೇಲ್ ಆಗಿಯೂ ಸುಮಾರು ಅರವತ್ತು ವರ್ಷದಿಂದ ನೆಲೆಸಿದೆ. ಇಂತಿರ್ಪ ಅಣಶಿ ಜನ ಇದ್ದುದರಲ್ಲಿಯೆ ಖುಷಿ ಪಡುವ, ಹೆಚ್ಚು ಆಸೆ ಹೊಂದಿರದ ಜನ.

ವರ್ಷಕ್ಕೊಮ್ಮೆ ಆಗುವ ಜಾತ್ರೆಗೆ ಒಂದು ನಾಟಕ ಮಾಡೋದು ಸಂಪ್ರದಾಯದಂತೆ ನಡೆದು ಬಂದ ಪದ್ಧತಿ. ಜಾತ್ರೆ ಎಂದ ಕೂಡಲೇ ಬಳೆ ಅಂಗಡಿ, ಗೊಂಬೆ ಅಂಗಡಿ ಎಲ್ಲ ಇರುತ್ತದೆ ಎಂದು ನೀವು ಭಾವಿಸಿದರೆ ಅದು ಶುದ್ಧ ತಪ್ಪು. ಅಣಶಿ ಕಡೆಗೆಲ್ಲ ಜಾತ್ರೆ ಅಂಗಡಿ ಮತ್ತೆ ಹೊಸದಾಗಿ ಬರುವುದಿಲ್ಲ. ತಾಮಡೋ ಮಾಮನ ಅಂಗಡಿ ಸ್ವಲ್ಪ ತನ್ನ ಮೈದೊಳೆದುಕೊಂಡು ಮತ್ತೆ ಹೊಸದಾಗಿ ನಿಲ್ಲುತ್ತದೆ; ಜೊತೆಗೆ ನಾರಗಾಳಿಯ ಉಪಾಸೊ ದೇವಳಿ, ಜಾತ್ರೆ ದಿನ ಪಂಪ್ ಸ್ಟವ್ ಇಟ್ಟುಕೊಂಡು ಮರದ ಬುಡದಲ್ಲಿ ಕುಳಿತು ಬಿಸಿ ಬಿಸಿ ಬೋಂಡ ಮಾಡಿ ಕೊಡುವ ಅಂಗಡಿ ಎದ್ದು ಕಾಣುತ್ತದೆ. ಹೀಗಾಗಿ ಅಣಶಿ ಕಡೆ ಜಾತ್ರೆ ಎಂದರೆ ಇವೆರಡು